ಕೊಡುವವರ ಸಂಖ್ಯೆ ಹತ್ತನ್ನು ದಾಟಲಾರದು.

ಒಳಗೆ ನೇತು ಹಾಕಿರುವ ಒಂದು ಬೋರ್ಡ್ ಹೀಗೆ ಹೇಳುತ್ತದೆ 'ಈ ಕಟ್ಟಡವನ್ನು ವಿಶ್ವದ ಎಂಟನೆಯ ಅದ್ಭುತವೆಂದು ಕರೆಯುವ ಕಾಲ ಸನ್ನಿಹಿತವಾಗಿದೆ. ಈ ಘೋಷಣೆ ಯಾವಾಗ ಬೇಕಾದರೂ ಆಗಬಹುದು.'

ರೊಮೇನಿಯಾದ ಅಧ್ಯಕ್ಷ ಟ್ರೇಯಾನ್ ಬ್ಯಾಸೆಸ್ಕ್ಯೂ ಈ ಅರಮನೆಯನ್ನು ಕಮ್ಯುನಿಸ್ಟರ ಸಂಕೇತವಾಗಿ ನೋಡುವುದರ ಬದಲಾಗಿ ಪ್ರಜಾತಂತ್ರದ ರೂಪಕವನ್ನಾಗಿ ಮಾರ್ಪಡಿಸಲು ಪ್ರಯತ್ನಿಸುತ್ತಿದ್ದಾರೆ. ಈ ಅರಮನೆ ರೊಮೇನಿಯಾದ ಎಲ್ಲರ ಶ್ರಮ ಸಹಿತ ದುಡಿಮೆಯನ್ನು ತೋರಿಸುತ್ತದೆ ಎಂದು ಉತ್ಪ್ರೇಕ್ಷಾಸಹಿತವಾಗಿ ಭಾಷಣ ಮಾಡುತ್ತಾರೆ.

ನನ್ನ ಸ್ನೇಹಿತೆ ಆಂಡ್ರೇಯಾ ಹೇಳುತ್ತಾಳೆ, 'ಹಿಂದೊಮ್ಮೆ ಈ ಅರಮನೆಯನ್ನು ನಮ್ಮ ಹೆಮ್ಮೆಯ ಸಂಕೇತವಾಗಿ ತಿಳಿಯಬೇಕೆಂದು ನನಗೆ ಪಾಠ ಮಾಡಿದ್ದರು. ಆದರೆ ಈಗ ಅದನ್ನು ಕಂಡರೆ ನನಗೆ ಜುಗುಪ್ಸೆ. ಆದರೆ ನಾನೇನೂ ಮಾಡಲಾಗುವುದಿಲ್ಲ. ಹೆಚ್ಚೆಂದರೆ ನಿರ್ಲಕ್ಷಿಸಬಹುದಷ್ಟೆ.'

ಆದರೆ ನಿಮ್ಮ ಇಂದ್ರಿಯಗಳಿಗೆ ಅಭ್ಯಾಸವಾಗಿರುವ ಅಳತೆಗಿಂತ ಎಷ್ಟೋ ಪಟ್ಟು ಅಧಿಕವಾಗಿರುವುದನ್ನು ನೋಡಿದಾಗ ನಿರ್ಲಕ್ಷಿಸುವುದೂ ಅಸಾಧ್ಯ ಅಲ್ಲವೇ? ನಾನು ನನ್ನ ಟ್ಯಾಕ್ಸಿಯಲ್ಲಿ ಕುಳಿತು ಪಿಯಾಟಾ ಅಲ್ಬಾ ಯೂಲಿಯಾದ ಹತ್ತಿರ ಹೋದಾಗ, ಈ ಅರಮನೆ ಪ್ರತಿಯೊಂದು ಬಾರಿಯೂ ಸಾವಧಾನದಿಂದ ನನ್ನನ್ನೇ ದಿಟ್ಟಿಸುತ್ತದೆ. ಆ ದೃಷ್ಟಿ ಅನಂತವಾದದ್ದು ಮತ್ತು ದಣಿವರಿಯದ್ದು. ಇನ್ನೊಂದು ದೊಡ್ಡ ಭೂಕಂಪ ಎಂದಾದರೂ ಬುಖಾರೆಸ್ಟ್‌ಗೆ ಬಡಿದಲ್ಲಿ, ಬೇರೆಲ್ಲವೂ ನುಚ್ಚು ನೂರಾಗಿ ದೂಳಾಗಬಹುದು. ಆದರೆ ಈ ಅರಮನೆಗೆ ಒಂದು ದೊಡ್ಡ ಬಿಕ್ಕಳಿಕೆ ಬಂದಂತಾದೀತು. ಅಷ್ಟೆ. ಅದು ಅಣುಬಾಂಬನ್ನು ಸಹ ಎದುರಿಸಿ ಗೆಲ್ಲುವ ಶಕ್ತಿಯನ್ನು ಪಡೆದಿದೆಯಂತೆ. ವಾಸ್ತುಶಿಲ್ಪಿ ಮತ್ತು ಭೂಗರ್ಭಶಾಸ್ತ್ರಜ್ಞರ ಒಂದು ದೊಡ್ಡ ಪಡೆಯೇ ಈ ಅರಮನೆ ಅಮರತ್ವವನ್ನು ತಂದು ಕೊಟ್ಟಿರಬೇಕು.

---


## ಮಾರ್ಗೋ ರೈಮರ್

ಪೋಲಿಶ್ ಪತ್ರಕರ್ತೆ ಮತ್ತು ಲೇಖಕಿ. ಹಲವಾರು ವರ್ಷಗಳನ್ನು ರೊಮೇನಿಯಾ ಮತ್ತು ಅಲ್ಬೇನಿಯಾದಲ್ಲಿ ಕಳೆದಿದ್ದಾರೆ.

## ಓಲ್ಗಾ ಡ್ರೆಂಡಾ

ಪತ್ರಕರ್ತೆ ಮತ್ತು ಲೇಖಕಿ. ಪೋಲೆಂಡ್‌ನ ಕ್ರಾಕೌ ನಿವಾಸಿ. ಅನೇಕ ಲೇಖನಗಳನ್ನು ಪೊಲಿಶ್ ಭಾಷೆಯಿಂದ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

## ಶಶಿಧರ ಡೋಂಗ್ರೆ

ಮೈಸೂರಿನಲ್ಲಿ ನೆಲೆಸಿರುವ ಶಶಿಧರ್ ಖಾಸಗಿ ಕಂಪೆನಿಯೊಂದರ ಎಂಜಿನಿಯರಿಂಗ್ ಮ್ಯಾನೇಜರ್ ಆಗಿದ್ದು, ಸಾಹಿತ್ಯ ಮತ್ತು ರಂಗಭೂಮಿ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಶಿವರಾಮ ಕಾರಂತರ ಕಾದಂಬರಿ 'ಅಳಿದ ಮೇಲೆ' ಅವರ ರೂಪಾಂತರದಲ್ಲಿ ನಾಟಕವಾಗಿ ಪ್ರದರ್ಶನಗೊಂಡಿದೆ.